# ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು : ಶ್ರೀಮತಿ ಭಾರತಿ ಶೆಟ್ಟಿ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 615

ಉತ್ತರಿಸಬೇಕಾದ ದಿನಾಂಕ : 11.07.2023

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಸಹಕಾರ ಲೆಕ್ಕ ಪರಿಶೋಧನೆ ನಿರ್ದೇಶನಾಲಯವನ್ನು ರಾಜ್ಯ ಲೆಕ್ಕಪತ್ರ ಇಲಾಖೆಯೊಂದಿಗೆ ವಿಲೀನ ಮಾಡಲಾಗಿದೆಯೇ; ಹಾಗಿದ್ದಲ್ಲಿ, ಎಂದಿನಿಂದ ಹಾಗೂ ಯಾವ ಷರತ್ತು ಅಥವಾ ಜವಾಬ್ದಾರಿಗಳೊಂದಿಗೆ ವಿಲೀನ ಮಾಡಲಾಗಿದೆ; (ವಿವರ ಒದಗಿಸುವುದು) | ಹೌದು.<br>6ನೇ ವೇತನ ಆಯೋಗದ ವರದಿಯ ಅಧ್ಯಾಯ-8ರ ಕ್ರಮ ಸಂಖ್ಯೆ 10ರಲ್ಲಿ ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆ ಹಾಗೂ ರಾಜ್ಯ ಲೆಕ್ಕ ಪರಿಶೋಧನೆ ಹಾಗೂ ಲೆಕ್ಕಪತ್ರ ಇಲಾಖೆಗಳ ಕಾರ್ಯವೈಖರಿಯು ಒಂದೇ ಆಗಿರುವುದರಿಂದ, ಎರಡೂ ಇಲಾಖೆಗಳನ್ನು ವಿಲೀನಗೊಳಿಸಬಹುದಾಗಿದೆ ಎಂದು ಶಿಫಾರಸ್ಸನ್ನು ಮಾಡಿರುತ್ತದೆ.<br>ಈ ಶಿಫಾರಸ್ಸನ್ನು ಆಧರಿಸಿ ಆರ್ಥಿಕ ಇಲಾಖೆಯು ಪರಿಶೀಲಿಸಿ, ಸರ್ಕಾರದ ಆದೇಶ ಸಂಖ್ಯೆ: ಆಇ 355 ರಾಲೆಪ 2022, ದಿನಾಂಕ:28.03.2023ರಲ್ಲಿ, ಯಾವುದೇ ಷರತ್ತು / ಜವಾಬ್ದಾರಿಗಳನ್ನು ನಿಗದಿಪಡಿಸದೆ ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆಯನ್ನು ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯಲ್ಲಿ ಒಂದು ಪ್ರತ್ಯೇಕ ವಿಭಾಗವಾಗಿ ವಿಲೀನಗೊಳಿಸಿ ಆದೇಶವನ್ನು ಹೊರಡಿಸಿರುತ್ತದೆ (ಪ್ರತಿ ಲಗತ್ತಿಸಿದೆ). |
| (ಆ) | ಪ್ರಸ್ತುತ ಸಹಕಾರಿ ಲೆಕ್ಕ ಪರಿಶೋಧನ ನಿರ್ದೇಶನಾಲಯದ ಆಡಳಿತ ಇಲಾಖೆ ಯಾವುದು; ಆರ್ಥಿಕ ಇಲಾಖೆಯೇ ಅಥವಾ ಸಹಕಾರಇಲಾಖೆಯೇ; | ಆರ್ಥಿಕ ಇಲಾಖೆಯ ಆದೇಶದಂತೆ, ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆಯ ಆಡಳಿತ ಇಲಾಖೆಯು ಆರ್ಥಿಕ ಇಲಾಖೆ ಆಗಿರುತ್ತದೆ. ಆದರೆ, ಈ ಇಲಾಖೆಯನ್ನು ಸಹಕಾರ ಇಲಾಖೆಯಲ್ಲಿ ಮುಂದುವರೆಸುವ ಬಗ್ಗೆ ಪರಿಶೀಲನೆಯ ಹಂತದಲ್ಲಿರುತ್ತದೆ. |
| (ಇ) | ವಿಲೀನವಾಗಿರುವುದರಿಂದ ಆರ್ಥಿಕ ಇಲಾಖೆಯ ಸಂಪೂರ್ಣ ಆಡಳಿತಕ್ಕೆ ಎಂದಿನಿಂದ ವಹಿಸಲಾಗುವುದು; | ಉದ್ಭವಿಸುವುದಿಲ್ಲ. |
| (ಈ) | ಸದರಿ ಸಂಸ್ಥೆಯ ಸಿಬ್ಬಂದಿ-ಅಧಿಕಾರಿಗಳ ಗೊಂದಲಗಳನ್ನು ಸರ್ಕಾರ ಕೂಡಲೇ ಬಗೆಹರಿಸುವುದೇ? | ಉದ್ಭವಿಸುವುದಿಲ್ಲ. |

ಸಂಖ್ಯೆ: ಸಿಒ 69 ಸಿಇಎಂ 2023

K. N. Rajanna

(ಕೆ.ಎನ್. ರಾಜಣ್ಣ)
ಸಹಕಾರ ಸಚಿವರು